ರಾಜ್ಯದಲ್ಲಿ ಬೀಡಿ ಕಾರ್ಮಿಕರ ಮಕ್ಕಳಿಗೆ ಶಿಷ್ಯವೇತನ ನೀಡುವುದು.

2216(2744) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

ಆ) ಬೀಡಿ ಕಾರ್ಮಿಕರ ಮಕ್ಕಳಿಗಾಗಿ ಸರಕಾರ ಶಿಷ್ಯವೇತನ ನೀಡುತ್ತಿದೆಯೇ? ಎಷ್ಟು ವಿದ್ಯಾರ್ಥಿ : ವಿದ್ಯಾರ್ಥಿನಿಯರು ಈ ಅವಕಾಶ ಪಡೆಯುತ್ತಿದ್ದಾರೆ?

ಇ) ಸದರಿ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣದ ಅವಶ್ಯಕತೆ ಇದೆ?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

ಅ) ರಾಜ್ಯದಲ್ಲಿ ಒಟ್ಟು 2,87,660 ಬೀಡಿ ಕಾರ್ಮಿಕರಿದ್ದಾರೆ (ಜಿಲ್ಲಾವಾರು ವಿವರವನ್ನು ಅನುಬಂಧ 1 ರಲ್ಲಿ ಲಗತ್ತಿಸಿದೆ.

ಆ) ಬೀಡಿ ಕಾರ್ಮಿಕರ ಮಕ್ಕಳಿಗಾಗಿ ರಾಜ್ಯ ಸರ್ಕಾರವು ಯಾವುದೇ ರೀತಿ ಶಿಷ್ಯವೇತನವನ್ನು ನೀಡುತ್ತಿಲ್ಲ, ಆದರೆ ಕೇಂದ್ರ ಸರ್ಕಾರವು ಬೀಡಿ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಗಳನ್ನು 2000-01ನೇ ಸಾಲಿಗೆ ಈ ಕೆಳಕಂಡಂತೆ ಅನುಷ್ಠಾನಗೊಳಿಸುತ್ತಿದೆ.

ವರ್ಷ	ಯೋಜನೆ	ನಿಧಿ	ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ (ವಿದ್ಯಾರ್ಥಿ : ವಿದ್ಯಾರ್ಥಿನಿಯರು)
2000-01	ಶಿಷ್ಯವೇತನ	ಬೀಡಿ	36,477
2000-01	ಸಮವಸ್ತ್ರ, ಸ್ಲೇಟು ಪುಸ್ತಕಗಳು	ಬೀಡಿ	6,000
2000-01	ಹಾಜರಾತಿ ಪ್ರೋತ್ಸಾಹ ಧನ	ಬೀಡಿ	18,812
2000-01	ಅಂಕಗಳಿಕೆಯಲ್ಲಿ ಪ್ರತಿ ಶೇಕಡ ಪ್ರೋತ್ಸಾಹ ಧನ	ಬೀಡಿ	1,446
		ಒಟ್ಟು	62,735

ಇ) ಕೇಂದ್ರ ಸರ್ಕಾರವು ಮೇಲ್ಕಂಡ ಸೌಲಭ್ಯವನ್ನು ವಿಸ್ತರಿಸಿರುವುದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಆರ್ಥಿಕ ಹೊರೆ ಬರುವುದಿಲ್ಲ.

ಅನುಬಂಧ

ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರ ಸಂಖ್ಯೆ (ಜಿಲ್ಲಾವಾರು)

1.	ದಕ್ಷಿಣ ಕನ್ನಡ ಜಿಲ್ಲೆ	-	1,81,083
2.	ಉಡುಪಿ ಜಿಲ್ಲೆ	-	57588
3.	ಶಿವಮೊಗ್ಗ ಜಿಲ್ಲೆ	-	200
4.	ಬೆಂಗಳೂರು ನಗರ ಜಿಲ್ಲೆ	-	1,973
5.	ಬೆಂಗಳೂರು ಗ್ರಾಮಾಂತರ ಜಿಲ್ಲೆ	-	9.248
6.	ತುಮಕೂರು ಜಿಲ್ಲೆ	-	8,348
7.	ಕೋಲಾರ ಜಿಲ್ಲೆ	-	3,081
8.	ಮೈಸೂರು ಜಿಲ್ಲೆ	-	1,610
9.	ಚಾಮರಾಜ ನಗರ ಜಿಲ್ಲೆ	-	3,715
10.	ಮಂಡ್ಯ ಜಿಲ್ಲೆ	-	6,282
11.	ದಾವಣಗೆರೆ ಜಿಲ್ಲೆ	-	5,736
12.	ಬಳ್ಳಾರಿ ಜಿಲ್ಲೆ	-	499
13.	ಹುಬ್ಬಳ್ಳಿ-ಧಾರವಾಡ ಜಿಲ್ಲೆ	-	1,228
14.	ಗದಗ ಜಿಲ್ಲೆ	-	98
15.	ಹಾವೇರಿ ಜಿಲ್ಲೆ	-	2,160
16.	ಬೆಳಗಾಂ ಜಿಲ್ಲೆ	-	2,795
17.	ಬಿಜಾಪುರ ಜಿಲ್ಲೆ	-	91
18.	ಬಾಗಲಕೋಟೆ ಜಿಲ್ಲೆ	-	783
19.	ಗುಲ್ಬರ್ಗಾ ಜಿಲ್ಲೆ	-	409
20.	ಕೊಪ್ಪಳ ಜಿಲ್ಲೆ	-	104
21.	ಹಾಸನ ಜಿಲ್ಲೆ	-	564
22.	ಚಿಕ್ಕಮಗಳೂರು ಜಿಲ್ಲೆ	-	70
23.	ಚಿತ್ರದುರ್ಗ ಜಿಲ್ಲೆ	-	--
24.	ರಾಯಚೂರು ಜಿಲ್ಲೆ	-	--
25.	ಮಡಕೇರಿ ಜಿಲ್ಲೆ	-	--
26.	ಕಾರವಾರ ಜಿಲ್ಲೆ	-	--
27.	ಬೀದರ್ ಜಿಲ್ಲೆ	-	--
	ಒಟ್ಟು	-	2,87,660